ಬಳಿಸಾರಿದ. ಆಶ್ಚರ್ಯವೆಂದರೆ ಅವನಿಗೇನೂ ಹೆದರಿಕೆಯಾಗದಿದ್ದದ್ದು. ಏನೋ ಚಲಿಸುತ್ತಿರುವ ಹಾಗೆ ಭಾಸವಾದರೂ ಅದನ್ನು ನೋಡಲಿಲ್ಲ. ತಾನೆಲ್ಲಿಗೆ ಹೋಗುತ್ತಿದ್ದೇನೆ ಎಂದು ತನಗೇ ಗೊತ್ತಿಲ್ಲದಿರುವಾಗ ಏನಾದರೂ ಆಗಿಬಿಡಬಹುದೆಂಬ ಹೆದರಿಕೆಗೂ ಜಾಗವಿರಬಾರದು. ಅದರಲ್ಲೇ ಏನೋ ಸಮಾಧಾನ.

ಮೂಲೆಯೊಂದರಲ್ಲಿ ತಿರುಗಿ ಅಂಗಡಿಗಳು ಸಾಲುಗಟ್ಟಿದ್ದ ಒಂದು ಬೀದಿಗೆ ಹೋದ. ಬೆಳಕಿನಿಂದ ಜಗಮಗಿಸುತ್ತಿದ್ದ ಒಂದೆರಡು ಅಂಗಡಿಗಳು. ಆಮೇಲೆ ದೀಪಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿಯೇ ಇನ್ನೊಂದು ಮೂಲೆಯಲ್ಲಿ ತಿರುಗಿದ. ಪೊಲೀಸಿನವನಾಗಲೀ ನೈಟ್ ವಾಚ್‌ಮನ್ ಆಗಲೀ ಕಣ್ಣಿಗೆ ಬೀಳಲಿಲ್ಲ. ಒಂದು ಚೌಕದ ಅಂಚಿನಲ್ಲಿ, ಯಾಕೆ ಪ್ರತಿಯೊಂದೂ ಇಷ್ಟು ಪರಿಚಿತವಾಗಿದೆ ಎಂದು ಆಶ್ಚರ್ಯಪಡುತ್ತಾ ಕೆಲವು ನಿಮಿಷಗಳು ಕೂತುಕೊಂಡ. ರಾತ್ರಿಯ ಆ ನೀರವದಲ್ಲಿ ಚೌಕದ ಮೂಲೆಯೊಂದರಲ್ಲಿದ್ದ ಗಡಿಯಾರ ಮೆಲ್ಲಗೆ ಚಲಿಸುತ್ತಿತ್ತು. ಚೌಕದ ಬದಿಗಳಲ್ಲಿದ್ದ ಲೋಹದ ಕಂಬಗಳು ಸ್ಥಿತಪ್ರಜ್ಞರಂತೆ, ತಾವೇ ಸರಿ ಎನ್ನುವಂತೆ ನಿಂತಿದ್ದವು. ಒಂದು ಕೊನೆಯಲ್ಲಿ ಸಾಲಾಗಿ ನಿಂತ ಬಸ್ಸುಗಳು. ದೂರದಲ್ಲಿ ಸಮುದ್ರದ ಸದ್ದು.

ಆ ಸದ್ದು ಬರುತ್ತಿದ್ದ ಕಡೆ ಹೆಜ್ಜೆ ಹಾಕಿದ. ತಾನು ಸಮುದ್ರದಿಂದ ದೂರವೇನೂ ಇಲ್ಲ ಎನಿಸಿತು. ಇದ್ದಕ್ಕಿದ್ದಂತೆ ಅವನಿಗೆ ಅವನ ತಂದೆಯ ಊರನ್ನು ನೆನಪಿಸಿದ ನೀರಿನ ವಾಸನೆ. ಅದೂ ಸಮುದ್ರ ತೀರದಲ್ಲಿದ್ದ ಊರು. ಹಿಂದೊಮ್ಮೆ ಅವನು ಅಲ್ಲಿನ ಬೀಚುಗಳಲ್ಲಿ, ಅಷ್ಟೇನೂ ಆಳವಾಗಿರದ ಸಮುದ್ರದಲ್ಲಿ ಇತರ ಎಲ್ಲ ಮಕ್ಕಳಂತೆ ಆಟವಾಡಿದ್ದ. ಆದರೆ, ಅದು ತನಗೆ ಸಂಬಂಧಪಟ್ಟ ಹಾಗೆ, ತನ್ನ ಊರಾದ ಹಾಗೆ ಮಾತ್ರ ಎಷ್ಟುಮಾತ್ರಕ್ಕೂ ಅನಿಸಿರಲಿಲ್ಲ. ಈಗ ನೀರು ಮೆಲ್ಲಗೆ ಸಮುದ್ರದ ಗೋಡೆಗೆ ಬಡಿಯುತ್ತಿತ್ತು. ಕಾಂಕ್ರೀಟ್ ಗೋಡೆಗೆ ಬಡಿದೂ ಬಡಿದೂ ಬಿಳಿಯ ನೊರೆಯಾಗುತ್ತಿದ್ದ ಅಲೆಗಳನ್ನು ನೋಡುವುದಕ್ಕಾಗಿಯೇ ನಿಂತುಕೊಂಡ. ಧಕ್ಕೆಯೊಂದರಲ್ಲಿ ದೀಪಗಳಿನ್ನೂ ಪ್ರಕಾಶಮಾನವಾಗಿ ಹೊಳೆಯುತ್ತಿದ್ದವು. ಜೊತೆಗೆ ಯಾಂತ್ರಿಕ ಚಟುವಟಿಕೆಯ ಸಪ್ಪಳ. ಸರಿರಾತ್ರಿಯ ಆ ಸಮಯದಲ್ಲಿ ಯಾರಾದರೂ ಅಲ್ಲಿ ಕೆಲಸಮಾಡುತ್ತಿರುವ ಸಂಭವವಿರಲಿಲ್ಲ.

ಕೊಲ್ಲಿಯಗುಂಟ ದೀಪಗಳಿದ್ದವು – ಕತ್ತಲ ಹಿನ್ನೆಲೆಯಲ್ಲಿ ಒಂದೊಂದಾಗಿ ಪೋಣಿಸಿದಂತೆ ಕಾಣಿಸುತ್ತಿದ್ದ ದೀಪಗಳು. ಯಾರು ವಾಸಮಾಡುತ್ತಿರಬಹುದು ಅಲ್ಲಿ? ಒಂದು ಬಗೆಯ ಭಯ ಅವನನ್ನು ಆವರಿಸಿಕೊಂಡಿತು. ನಗರದ ಆ ಕಗ್ಗತ್ತಲ ಮೂಲೆಯಲ್ಲಿ ವಾಸಮಾಡುತ್ತಿರುವ ಜನರನ್ನು ಕಲ್ಪಿಸಿಕೊಂಡ. ಅವನ ಮನಸ್ಸಿನಲ್ಲಿ ತನ್ನನ್ನು ದಿಟ್ಟಿಸುತ್ತ ಗಹಗಹಿಸಿ ನಗುತ್ತಿದ್ದ ಕ್ರೂರ ಮೋರೆಗಳ ಸೈಂಧವರು ಕಾಣಿಸಿಕೊಂಡರು. ಕಾಡಿಲ್ಲದ, ಮಬ್ಬುಮಬ್ಬಾಗಿ ಕಾಣಿಸುತ್ತಿದ್ದ ಕಾಡು ಬಯಲನ್ನು ನೋಡಿದ. ಅಲ್ಲಿ ನೆರಳುಗಳು ಅಪರಿಚಿತನೊಬ್ಬನಿಗಾಗಿ ಠಳಾಯಿಸುತ್ತಿದ್ದವು. ಸ್ವಲ್ಪ ಹೊತ್ತಿನ ಅನಂತರ ಹೆಂಗಸರು ಗಂಡಸರು ಒಂದು ದೇಹವನ್ನು ಸುತ್ತುವರಿದಿದ್ದರು. ಅವರ ಕಾಲುಗಳು ಹಳೆಯ ಧಾರ್ಮಿಕ ವಿಧಿಯೊಂದರಲ್ಲಿ ಲಯಬದ್ಧವಾಗಿ ನೆಲಕ್ಕೆ ಬಡಿಯುತ್ತಿರುವುದನ್ನೂ, ಶತ್ರುಗಳ ರಕ್ತ ನೆಲದಲ್ಲಿ ಇಂಗುತ್ತಿರುವಂತೆ ಅವರೆಲ್ಲ ವಿಜಯೋತ್ಸಾಹದಿಂದ ಕೇಕೆ ಹಾಕುತ್ತಿರುವುದನ್ನೂ ಕೇಳಿಸಿಕೊಂಡ. ಕೊಲ್ಲಿಯ ಕತ್ತಲಿನಲ್ಲಿರುವ ಮಂದಿ ತನ್ನ ಮೇಲೆ ಹಲ್ಲೆಮಾಡಬಹುದೆಂದಷ್ಟೇ ಅವನು ಹೆದರಿಕೊಳ್ಳಲಿಲ್ಲ. ಯಾಕೆಂದರೆ, ಅವರಿಗೆ ತಾವೆಲ್ಲಿದ್ದೇವೆಂದು ಗೊತ್ತಿತ್ತು. ಆದರೆ, ಅವನು ಮಾತ್ರ ಎಲ್ಲಿಯೂ ಸಲ್ಲದವನಂತಿದ್ದ.

ಅಂಗಡಿಗೆ ಹೋಗಲು ಹಿಂದೆ ತಿರುಗಿದ – ತಾನೆಂಥ ಧೈರ್ಯಮಾಡಿದೆನೆಂಬ ಭಾವನೆಯನ್ನು ಹತ್ತಿಕ್ಕಲಾಗದೆ. ಆಮೇಲೆ ರಾತ್ರಿ ಅಂಗಡಿಯ ಬಾಗಿಲು ಹಾಕಿ, ಫಜೀರನನ್ನು ವಿಚಾರಿಸಿಕೊಂಡ ಅನಂತರ ಸಮುದ್ರ ತೀರದಲ್ಲಿ ನಡೆದಾಡುವುದೊಂದು ರೂಢಿಯಾಗಿಬಿಟ್ಟಿತು. ಫಝೀರನಿಗೆ ಅದು